**ಸಂಪನ್ಮೂಲ ವ್ಯಕ್ತಿಗಳಿಗೆ ಟಿಪ್ಪಣಿ**

**ಸಾರ್ವಜನಿಕ  ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ತಂತ್ರಾಂಶದ ಸಾಫ್ಟವೇರ್ ತತ್ವಗಳು - ದಕ್ಷಿಣ ಭಾರತೀಯ ಮಟ್ಟದ ಕಾರ್ಯಾಗಾರ**

ಈ ಕಾರ್ಯಾಗಾರವು ಕೆಲವು ನಿರ್ದಿಷ್ಟವಾದ ಫಲಿತಾಂಶಗಳನ್ನು ಎದುರುನೋಡುತ್ತಿದ್ದು ಮುಖ್ಯವಾಗಿ ಸಂಪನ್ಮೂಲ ವ್ಯಕ್ತಿಗಳು ವಿಶೇಷವಾದ ಜವಬ್ದಾರಿಯನ್ನು ಹೊಂದಿದ್ದಾರೆ.ಈ ಕಾರ್ಯಾಗಾರವು *ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ಮಾರ್ಗದರ್ಶಿ ತತ್ವ*ಗಳನ್ನು ಸೃಷ್ಟಿಸುವ ಜವಾಬ್ದಾರಿಯನ್ನು ಹೊಂದಿದೆ. ಈ ಟಿಪ್ಪಣಿಯು ಪ್ರತಿಯೊಂದು ಸೆಶನ್ ಉದ್ದೇಶಗಳು, ಗುರಿಗಳನ್ನು ಮತ್ತು ಸಂಪನ್ಮೂಲ ವ್ಯಕ್ತಿಗಳಿಂದ ನಮ್ಮ ನಿರೀಕ್ಷೆಯನ್ನು ವಿವರಿಸುತ್ತದೆ.

**ಮೊದಲನೆಯ ದಿನ-ಸಾರ್ವಜನಿಕ ಶಿಕ್ಷಣಕ್ಕೆ ಸಾರ್ವಜನಿಕ ಸಾಫ್ಟವೇರ್**

**ಮೊದಲನೆಯ ಸೆಶನ್ -** ಸನ್ನಿವೇಶನದ ನಿರೂಪಣೆ, ಉದ್ದೇಶಗಳು ಮತ್ತು ಪದ್ಧತಿ

ಉದ್ದೇಶಗಳು

ಕಾರ್ಯಾಗಾರದ ಪ್ರಾಥಮಿಕವಾದ ಉದ್ದೇಶವು ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ತತ್ವಗಳನ್ನು ಮತ್ತು ನಿಯಮಗಳ ಮಾರ್ಗದರ್ಶಿಯನ್ನು ಸಹಯೋಗಿಸುವುದಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ನಿರ್ದಿಷ್ಟವಾದ ಅಗತ್ಯತೆಗಳ ( ಸಾರ್ವಜನಿಕರ ಹಿತಾಸಕ್ತಿಯನ್ನು ಎತ್ತಿಹಿಡಿಯುವುದು, ಸಾರ್ವಜನಿಕ ಪರಿಕರಗಳ ಉತ್ಪಾದನೆ,ಸಾರ್ವಜನಿಕ ಪರಿಕರಗಳ ಸಾರ್ವತ್ರಿಕ ದೊರಕುವಿಕೆ, ಪಾರದರ್ಶಕತೆ, ಜವಬ್ದಾರಿ,ಭಾಗವಹಿಸುವಿಕೆ, ಸಮತೆ ಮತ್ತು ಸಾಮಾಜಿಕ ನ್ಯಾಯ) ಮೂಲಕ ಕಾರ್ಯನಿರ್ವಹಿಸುವುದಾಗಿದೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಗಮನಹರಿಸಿದಂತೆ ಸಾರ್ವಜನಿಕ ಸಾಫ್ಟವೇರ್ ಎದುರಿಸುವ ಸಮಸ್ಯೆಗಳ ಬಗ್ಗೆ ಈ ಸೆಶನ್ ಗಮನಹರಿಸಲಿದೆ.

ಪದ್ಧತಿ- ಮುಕ್ತವಾದ ಚರ್ಚೆ

1. ತಜ್ಞರಿಂದ(ಪ್ಯಾನಲಿಸ್ಟ್) ಮೊದಲಿಗೆ ಹತ್ತು ನಿಮಿಷಗಳ ಕಾಲದ ಮಂಡನೆಯನ್ನು ಮಾಡಲಿದ್ದು ಆನಂತರ ಚರ್ಚೆಯನ್ನು ಕೈಗೊಳ್ಳಲಾಗುವುದು. ಅಧ್ಯಕ್ಷರು ನಿರ್ವಾಹಕರ ಪಾತ್ರವನ್ನು ಮಾಡಲಿದ್ದಾರೆ
2. ತಜ್ಞರ ತಂಡದ (ಪ್ಯಾನಲ್) ಚರ್ಚೆ ಕೊನೆಗೊಂಡ ನಂತರ ಭಾಗವಹಿಸುದಾರರು ತಜ್ಞ(ಪ್ಯಾನಲಿಸ್ಟ್) ರೊಂದಿಗೆ ಪರಸ್ಪರ ಸಂವಹನವನ್ನು ಮಾಡಲಿದ್ದಾರೆ.
3. ಅಂತಿಮವಾಗಿ ಅಧ್ಯಕ್ಷರು ಈ ಚರ್ಚೆಯ ಸಾರಾಂಶವನ್ನು ಸಂಕ್ಷೇಪಿಸುತ್ತಾರೆ.

**ಎರಡನೇ ಸೆಶನ್ –** ಮುಂದಿನ ದಶಕದಲ್ಲಿ ಸಾರ್ವಜನಿಕ ಶಿಕ್ಷಣದ ಪರಿಕಲ್ಪನೆ

ಈ ಸೆಶನ್ ನಲ್ಲಿ ತಜ್ಞರು(ಪ್ಯಾನಲಿಸ್ಟ್ ) ಮಾಹಿತಿ ಸಂವಹನ ತಂತ್ರಜ್ಞಾನವು (ಐಸಿಟಿ) ಸಾಮಾಜಿಕ ಪ್ರಕ್ರಿಯೆಯಲ್ಲಿ ಬೀರಿದ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲಲಿದ್ದಾರೆ. ಮುಂದಿನ ಹತ್ತು ವರ್ಷಗಳಲ್ಲಿ ಶಾಲೆ ಮತ್ತು ತರಗತಿಯಲ್ಲಿ ಐಸಿಟಿಯ ಪಾತ್ರವೇನು ಎಂಬುದರ ಬಗ್ಗೆ ಪರಿಕಲ್ಪನೆಯನ್ನು ನೀಡಲಿದ್ದಾರೆ

## ಮೂರನೇ ಸೆಶನ್ – ಸಾರ್ವಜನಿಕ ಶಿಕ್ಷಣದಲ್ಲಿನ ಸಾಫ್ಟವೇರ್ ಗಾಗಿ ತತ್ವಗಳನ್ನು ಗುರುತಿಸುವುದು – ಅನುಭಗಳ ಹಂಚಿಕೆ

ಐಟಿ@ಸ್ಕೂಲ್ಸ್ ಪ್ರೋಗ್ರಾಂ- ಕೇರಳ ರಾಜ್ಯದ ವೈಯುಕ್ತಿಕ ಅಧ್ಯಯನದ ಮಂಡನೆ ಮತ್ತು ವಿವಿಧ ರಾಜ್ಯಗಳಲ್ಲಿ ಅಳವಡಿಸಿಕೊಂಡ ಐಸಿಟಿ ಕಾರ್ಯಕ್ರಮಗಳ ಬಗ್ಗೆ ಪ್ರತಿನಿಧಿಗಳಿಂದ ಚರ್ಚೆ

ಕೇರಳ ರಾಜ್ಯದಲ್ಲಿನ ಐಟಿ@ಸ್ಕೂಲ್ಸ್ ಪ್ರೋಗ್ರಾಂಗೆ ಸಂಬಂಧಪಟ್ಟಂತೆ ರಾಜ್ಯವು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಐಸಿಟಿಯನ್ನು ಶಿಕ್ಷಣ ಪದ್ಧತಿಯಲ್ಲಿ ಬಳಸಿದೆ ಮತ್ತು ಈ ವ್ಯವಸ್ಥೆಯನ್ನು ಬಲಪಡಿಸುವುದು ಹೇಗೆ ಮತ್ತು ಭವಿಷ್ಯದಲ್ಲಿ ಮಾಡಬೇಕಾಗಿರುವುದು ಎನು ಎಂಬುದರ ಬಗ್ಗೆ ಚರ್ಚೆಯನ್ನು ಮಾಡಲಾಗುತ್ತದೆ. ವೈಯುಕ್ತಿಕ ಅಧ್ಯಯನವು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿನ ವಿವಿಧ ನಿರೂಪಣಾ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಲಿದೆ.

## ನಾಲ್ಕನೇ ಸೆಶನ್ – ಅಂಕೀಯ ಕಲಿಕಾ ಪರಿಕರಗಳು (Digital learning material): ನಿಯಮಗಳು ಮತ್ತು ಅಭ್ಯಾಸಗಳ ಮೇಲೆ ಪ್ರಭಾವಗಳು

ಅಂಕೀಯ ವ್ಯವಸ್ಥೆಯು, ಸುಲಭ ಹಂಚಿಕೆ ಮತ್ತು ಸಹಸೃಷ್ಟಿಯನ್ನು ಬಲಪಡಿಸುತ್ತದೆ ಈ ಸೆಶನ್ ಅಂಕೀಯ ಕಲಿಕಾ ಪರಿಕರಗಳ ಪಾತ್ರವನ್ನು ಮತ್ತು ಪ್ರಕ್ರಿಯೆಯ ಬಗ್ಗೆ ಮಾಹಿತಿಯನ್ನು ಒದಗಿಸಲಿದೆ. ಈ ಸೆಶನ್ ನಲ್ಲಿ ಇಲೆಕ್ಟ್ರಾನಿಕ್ – ಪಠ್ಯಪುಸ್ತಕಗಳ ಸೃಷ್ಟಿ ಮತ್ತು ಬಳಕೆಯ ಬಗ್ಗೆ ಚರ್ಚಿಸಲಾಗುತ್ತದೆ.

## ಐದನೆಯ ಸೆಶನ್ – ಶಿಕ್ಷಕರ ಶಿಕ್ಷಣ ಮತ್ತು ಸಾಮರ್ಥ್ಯವನ್ನು ಬಲಪಡಿಸುವುದಕ್ಕಾಗಿ ಐಸಿಟಿ: ನಿಯಮಗಳು ಮತ್ತು ಅಭ್ಯಾಸದ ಮೇಲೆ ಪ್ರಭಾವಗಳು

ಈ ಸೆಶನ್ ಶಿಕ್ಷಕರ ಶಿಕ್ಷಣ ಮತ್ತು ಸಾಮರ್ಥ್ಯವನ್ನು ಬಲಪಡಿಸುವುದಕ್ಕಾಗಿ ಐಸಿಟಿಯ ಪ್ರಸ್ತುತ ಮತ್ತು ಅಗತ್ಯದ ಅಭ್ಯಾಸಗಳನ್ನು ಪರಿಶೀಲಿಸುತ್ತದೆ. ಈ ಪರಿಶೀಲನೆಯಿಂದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಭವಿಷ್ಯದ ಅಗತ್ಯತೆಗಳಿಗೆ ಸೂಕ್ತವಾದ ನಿಯಮಗಳು ಮತ್ತು ಅಭ್ಯಾಸಗಳನ್ನು ರೂಪಿಸಬಹುದು.

ಶಿಕ್ಷಣದಲ್ಲಿ ಐಸಿಟಿ ಕಾರ್ಯವಿಧಾನವನ್ನು ಬಳಸುವ ಶಿಕ್ಷಕರ ಪಾತ್ರವನ್ನು ಇದು ತಿಳಿಸಲಿದೆ, ಶಿಕ್ಷಣ ವ್ಯವಸ್ಥೆಯಲ್ಲಿನ ಎಲ್ಲಾ ಕುಂದುಕೊರತೆಗಳಲ್ಲೂ ಜವಬ್ದಾರಿಯನ್ನು ತರಲಿದೆ.ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ಪ್ರಮುಖ ಭಾಗವಾಗಿದ್ದಾರೆ.

## ಆರನೆಯ ಸೆಶನ್ – ಸಾರ್ವಜನಿಕ ಶಿಕ್ಷಣದಲ್ಲಿನ ಸಾಫ್ಟವೇರ್ ಗಾಗಿ ಕ್ಲಿಷ್ಟಕರ ತತ್ವಗಳು

ಕೊನೆಯ ಸೆಶನ್ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಸಾಫ್ಟವೇರ್/ ಡಿಜಿಟಲ್ ಆರ್ಕಿಟೆಕ್ಚರ್ ತತ್ವಗಳ ಅಳವಡಿಕೆ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.ಪ್ರಸ್ತುತದ ಕಾರ್ಯಕ್ರಮಗಳು ಮತ್ತು ನಿಯಮಗಳು ಭವಿಷ್ಯದಲ್ಲಿನ ಸವಾಲುಗಳನ್ನು ಗುರುತಿಸಲು ಹತ್ತಿರವಾಗಿದೆಯೇ? ಅಂಕೀಯ ಕಲಿಕಾ ಅವಕಾಶಗಳನ್ನು ಸಾರ್ವತ್ರಿಕವಾಗಿ ಪಡೆಯುವುದು ಹೇಗೆ? ಕಂಪ್ಯೂಟರ್ ಕಲಿಕೆಯನ್ನು ಶಾಲಾ ವ್ಯವಸ್ಥೆಯಲ್ಲಿ ಸಂಯೋಜಿಸುವುದು ಹೇಗೆ? ಅಂಕೀಯ ಕಲಿಕಾ ಪರಿಕರಗಳನ್ನು ಸೃಷ್ಟಿಸುವುದು ಹೇಗೆ?

ಈ ಹಿಂದಿನ ಸೆಶನ್ ಗಳಲ್ಲಿ ಚರ್ಚಿಸಿದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಅಗತ್ಯತೆಗಳನ್ನು ಗುರುತಿಸಲು ಯಾವ ವಿದದ ದೃಷ್ಟಿಕೋನ, ರಚನೆ ಮತ್ತು ಪ್ರಕ್ರಿಯೆಯ ಅವಶ್ಯಕತೆಯಿದೆ? ಎಂಬಿತ್ಯಾದಿ ವಿಷಯಗಳ ಬಗ್ಗೆ ಗಮನವನ್ನು ನೀಡಲಿದೆ

---

## ಎರಡನೆಯ ದಿನ – ಸಾರ್ವಜನಿಕ ವಿಭಾಗದ ಸಾಫ್ಟವೇರ್ ನಿಯಮಗಳು ಮತ್ತು ಮಾರ್ಗದರ್ಶಿಗಳು

### ಮೊದಲನೆಯ ಸೆಶನ್ – ಸಾರ್ವಜನಿಕ ವಿಭಾಗಕ್ಕೆ ಸಾಫ್ಟವೇರ್: ಮುಖ್ಯವಾದ ಲಕ್ಷಣಗಳು ಮತ್ತು ಅಗತ್ಯತೆಗಳು

*ಸಾರ್ವಜನಿಕ ವಿಭಾಗದ ಸಾಫ್ಟವೇರ್ ತತ್ವಗಳ ಪರಿಕಲ್ಪನೆ,ಅಗತ್ಯತೆಗಳು ಮತ್ತು ಸಮಸ್ಯೆಗಳ ವಿಶ್ಲೇಷಣೆ.ಹಿಂದಿನ ದಿನದ ಸೆಶನ್ ಗಳು ಮತ್ತು ಉದಾಹರಣೆಗಳಿಂದ ಈ ವಿಶ್ಲೇಷಣೆಯನ್ನು ಮಾಡಲಾಗುತ್ತದೆ*

ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗವರ್ನೆನ್ಸ್ ಪ್ರಕ್ರಿಯೆಗೆ ಹೊಸ ಆರ್ಕಿಟೆಕ್ಚರ್ ನ್ನು ರಚಿಸಬೇಕಾಗಿದ್ದು ಭಾರತಸರ್ಕಾರವು ಬಹಳ ಪಾರದರ್ಶಕವಾಗಿರಲು, ಜವಬ್ದಾರಿಯಿಂದ ನಡೆದುಕೊಳ್ಳಲು ಮತ್ತು ಭಾಗವಹಿಸುವಿಕೆಯಿಂದ ಕೂಡಿರಲು ಇದರ ಅವಶ್ಯಕತೆಯಿದೆ.

ಅಂಕೀಯ ವ್ಯವಸ್ಥೆಯ ಮುಖಾಂತರ ಗವರ್ನೆನ್ಸ್ ಸುಧಾರಣೆ ನಮ್ಮ ನಿರೀಕ್ಷೆಗಳಾವುವು, ಮತ್ತು ಈ ನಿರೀಕ್ಷೆಗಳು ಸಾರ್ವಜನಿಕ ಸಾಫ್ಟವೇರ್ ಗೆ ಮೂಲಭೂತ ತತ್ವಗಳನ್ನು ಹೇಗೆ ಒದಗಿಸಲಿದೆ, ವಿಷಯಗಳು (ಸಂಪೂರ್ಣ ಒಡೆತನ, ಸಾರ್ವಜನಿಕ ಸಾಫ್ಟವೇರ್ ದಾದ್ಯಂತ ಸಾಮರ್ಥ್ಯಗಳನ್ನು ಹಂಚಿಕೊಳ್ಳುವುದು, ಅಂಕೀಯ ಪ್ರಕ್ರಿಯೆಯ ಪಾರದರ್ಶಕತೆ, ಅವಶ್ಯಕತೆಗಳು, ಭಾಷೆಯ ಬಳಕೆ, ಸಹ ಸೃಷ್ಟಿಯ ಸಾಧ್ಯತೆಗಳು, ಅವಶ್ಯಕತೆಗನುಗುಣವಾದ ಬದಲಾವಣೆಗಳು)ಸಾರ್ವಜನಿಕ ಸಾಫ್ಟವೇರ್ ನ ಎಲ್ಲಾ ತತ್ವಗಳ ಬಗ್ಗೆ ಇಲ್ಲಿ ಚರ್ಚೆಯನ್ನು ಮಾಡಲಾಗುತ್ತದೆ. ಈ ಸೆಶನ್ ನಲ್ಲಿ ಭಾಗವಹಿಸುದಾರರು ಗವರ್ನೆನ್ಸ್ ಪ್ರಕ್ರಿಯೆಯಲ್ಲಿನ ತಮ್ಮ ಜ್ಞಾನ ಮತ್ತು ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ.

### ಎರಡನೆ ಸೆಶನ್ – ಸಾರ್ವಜನಿಕ ವಿಭಾಗಕ್ಕೆ ಸಾಫ್ಟವೇರ್: ಕ್ಷೇತ್ರದಲ್ಲಿನ ಅನುಭವಗಳ ಹಂಚಿಕೆ

ಸಾರ್ವಜನಿಕ ವಿಭಾಗದಲ್ಲಿ ಪ್ರಸ್ತುತ ಯೋಜನೆಗಳ ರಚನೆಗಳು ಮತ್ತು ಸಾಫ್ಟವೇರ್ ಅಭಿವೃದ್ಧಿ/ಅನುಷ್ಠಾನದಲ್ಲಿ ಬರುವ ತೊಂದರೆಗಳ ಚರ್ಚೆ

ಈ ಸೆಶನ್ ಮೊದಲನೇ ಸೆಶನ್ ನ ಚರ್ಚೆಯನ್ನು ಮುಂದಕ್ಕೆ ತೆಗೆದುಕೊಂಡುಹೋಗಲಿದೆ. ಕೆಲವು ಪ್ರಮುಖವಾದ ವಿಷಯಗಳ ಬಗ್ಗೆ ಇಲ್ಲಿ ಮುಕ್ತವಾದ ಚರ್ಚೆಯನ್ನು ಮಾಡಲಾಗುತ್ತದೆ. ಇಲ್ಲಿ ತಮ್ಮ ಯೋಜನೆಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕಿಂತಲೂ ಅಭ್ಯಾಸಗಳು ಮತ್ತು ನಿಯಮಗಳಿಗೆ ತತ್ವಗಳನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಈ ಸೆಶನ್ ಗಮನಹರಿಸುತ್ತದೆ.

### ಮೂರನೇ ಸೆಶನ್ – ಸಮಗ್ರ ಜ್ಞಾನ ಸಮಾಜಕ್ಕಾಗಿ ಅಂಕೀಯ ವಿನ್ಯಾಸ ( Digital architecture for an inclusive Knowledge Society)

ಈ ಸೆಶನ್ ಸಮಗ್ರ ಜ್ಞಾನ ಸಮಾಜಕ್ಕಾಗಿ ಅಗತ್ಯ ಸಾರ್ವಜನಿಕ ಸಲಕರಣೆಗಳ ಅಭಿವೃದ್ಧಿಗೆ ನಿಯಮಗಳ ಪಾತ್ರವನ್ನು ಪ್ರತಿಬಿಂಬಿಸುತ್ತದೆ

## ನಾಲ್ಕನೇಯ ಸೆಶನ್– ಕ್ರಿಯಾ ಯೋಜನೆ – ತತ್ವಗಳ ಬಗ್ಗೆ ದಾಖಲೆ, ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ವಿನ್ಯಾಸ

*ಎರಡು ದಿನದ ಚರ್ಚೆಯನ್ನು ಆಧಾರವಾಗಿಟ್ಟುಕೊಂಡು ಸಾರ್ವಜನಿಕ ವಿಭಾಗಕ್ಕೆ ಸಾಫ್ಟವೇರ್ ನ ಕಾರ್ಯಕ್ರಮಗಳ ಮತ್ತು ನಿಯಮಗಳ ರೂಪಣೆ*

ಈ ಸೆಶನ್ ನಲ್ಲಿ ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ಸೂಕ್ತವಾದ ಅಭ್ಯಾಸಗಳ ಮತ್ತು ನಿಯಮಗಳ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು ಹೇಗೆ ಎಂಬುವುದರ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವುದರ ಬಗ್ಗೆ ಚರ್ಚೆಯನ್ನು ಮಾಡುತ್ತದೆ.